	ಮುಂತಾದವುಗಳ ಮೀಸಲಾತಿ) (ತಿದ್ದು-ಪಡಿ) ವಿಧೇಯಕ, 2011 (ಎಲ್ ಎ ಬಿಲ್ ನಂ: 42/2011)		
16	ದಂಡ ಪ್ರಕ್ರಿಯಾ ಸಂಹಿತೆ (ಕರ್ನಾಟಕ ತಿದ್ದುಪಡಿ) ವಿಧೇಯಕ, 2009 (ಎಲ್ ಎ ಬಿಲ್ ನಂ: 40/2009)	24.10.2012	ರಾಷ್ಟ್ರಪತಿ

ಅಧ್ಯಕ್ಷರು:- ಮಾನ್ಯ ರೇವಣ್ಣನವರು ಒಂದು ನೋಟೀಸ್ ಕೊಟ್ಟಿದ್ದಾರೆ.

ಶ್ರೀ ಹೆಚ್.ಡಿ. ರೇವಣ್ಣ:- ಕಾವೇರಿ ವಿಷಯದಲ್ಲಿ ನಾನೂ writing ನಲ್ಲಿ ಕೊಟ್ಟಿದ್ದೇನೆ.

(ಗೊಂದಲ)

ಶ್ರೀ ಸಿದ್ದರಾಮಯ್ಯ:- Writing ನಲ್ಲಿ ಕೊಟ್ಟರೆ ಈಗ ತೆಗೆದು-ಕೊಳ್ಳುತ್ತಾರೆಯೇ?

(ಗೊಂದಲ)

ಅಧ್ಯಕ್ಷರು:- ನೀವೇ ಹೀಗೆ ವಾದ ಮಾಡಿದರೆ ಹೇಗೆ?

(ಗೊಂದಲ)

ಶ್ರೀ ಸಿದ್ದರಾಮಯ್ಯ:- This is not correct. ಹಾಗಾದರೆ, Leader of the opposition ಏಕೆ ಇರಬೇಕು ಹೇಳಿ? ಈ ತರಹ ನೀವು ಹಾಗೆ treat ಮಾಡುವುದಕ್ಕಾಗುವುದಿಲ್ಲ.

(ಗೊಂದಲ)

ಶ್ರೀ ಹೆಚ್.ಡಿ. ರೇವಣ್ಣ:- ಮಾನ್ಯ ಸಭಾಧ್ಯಕ್ಷರೆ, ದಯಮಾಡಿ ಅವಕಾಶ ಮಾಡಿಕೊಡಬೇಕು.

(ಗೊಂದಲ)

ಶ್ರೀ ಸಿದ್ದರಾಮಯ್ಯ:- Writing ನಲ್ಲಿ ಕೊಡುವುದಕ್ಕೆ ಯಾವ ನಿಯಾಮಾವಳಿ ಇದೆ?

ಅಧ್ಯಕ್ಷರು:- Opposition Leader ಮಾತನಾಡಲು ಎದ್ದು ನಿಂತಾಗ ನಾನು ಅವಕಾಶ ಕೊಡಬೇಕು ತಾನೆ?

(ಗೊಂದಲ)

ಶ್ರೀ ಹೆಚ್.ಡಿ. ರೇವಣ್ಣ:- ಮಾನ್ಯ ಅಧ್ಯಕ್ಷರೆ, ಬರೆದುಕೊಟ್ಟವರು ನಾವು.

(ಗೊಂದಲ)

ಶ್ರೀ ಹೆಚ್.ಡಿ. ರೇವಣ್ಣ:- ಮಾನ್ಯ ಅಧ್ಯಕ್ಷರೆ, ನೀವು ಅರ್ಥ ಮಾಡಿಕೊಳ್ಳಬೇಕು.

(ಗೊಂದಲ)

ಅಧ್ಯಕ್ಷರು:- ವಿರೋಧ ಪಕ್ಷದ ನಾಯಕರು ಎದ್ದು ನಿಂತಿದ್ದಾರೆ, ಏನು ಹೇಳುತ್ತಾರೆ ಎನ್ನುವುದನ್ನು ಕೇಳೋಣ. ಆಮೇಲೆ ನೀವು ಪ್ರಸ್ತಾಪ ಮಾಡಿ.

(ಗೊಂದಲ)

ಶ್ರೀ ಸಿದ್ದರಾಮಯ್ಯ:- ನಮಗೆ ಮಾಧ್ಯಮದ ಮೂಲಕ ಗೊತ್ತಾದ ತಕ್ಷಣ raise ಮಾಡಿದ್ದೇನೆ. ಅವರು ಕೊಟ್ಟ ತಕ್ಷಣ ಅವರೇ ಮಾತನಾಡ-ಬೇಕೆಂದೇನೂ ಇಲ್ಲ. Priority should be given to the Leader of the Opposition.

(ಗೊಂದಲ)

ಅಧ್ಯಕ್ಷರು:- ಎಲ್ಲರಿಗೂ ಅವಕಾಶ ಕೊಡುತ್ತೇನೆ.ಇದು ಗಂಭೀರವಾದ ವಿಚಾರ.

(ಗೊಂದಲ)

ಶ್ರೀ ಹೆಚ್.ಡಿ. ರೇವಣ್ಣ :- ಪ್ರಸ್ತಾವನೆ ಮಾಡಿರುವುದು ನಾವು. ನಾವು writing ನಲ್ಲಿ ಕೊಟ್ಟಿದ್ದೇವೆ.

(ಗೊಂದಲ)

ಶ್ರೀ ಸಿದ್ದರಾಮಯ್ಯ:- ಮಾನ್ಯ ಅಧ್ಯಕ್ಷರೆ, first you take a decision.

ಅಧ್ಯಕ್ಷರು:- ತಾವು ಮಾತನಾಡಿ.

(ಗೊಂದಲ)

ಅಧ್ಯಕ್ಷರು:- ಈಗ Opposition Leader ಎದ್ದು ನಿಂತಾಗ ಅವರಿಗೆ ಅವಕಾಶ ಕೊಡುವುದಿಲ್ಲವೆಂದರೆ ಹೇಗೆ ಆಗುತ್ತದೆ?

(ಗೊಂದಲ)

ಅಧ್ಯಕ್ಷರು:- ನೀವೂ ಇಷ್ಟು ವರ್ಷ ಸದಸ್ಯರಾಗಿದ್ದೀರಿ. ಅದು ಹೇಗೆ ಆಗುತ್ತದೆ?

(ಗೊಂದಲ)

ಅಧ್ಯಕ್ಷರು:- Opposition leader ಎದ್ದು ನಿಂತಾಗ ಮಾತನಾಡಕೂಡದು ಎಂದರೆ ಹೇಗೆ?

(ಗೊಂದಲ)

ಅಧ್ಯಕ್ಷರು:- Leader of the Opposition ಅಂದರೆ. . ನೀವು ತಿಳಿದುಕೊಳ್ಳದಿದ್ದರೆ I am sorry.

ಶ್ರೀ ಹೆಚ್.ಡಿ. ರೇವಣ್ಣ:- ಮಾನ್ಯ ಅಧ್ಯಕ್ಷರೆ, ನೀವು ಅರ್ಥ ಮಾಡಿಕೊಳ್ಳಬೇಕು.

(ಗೊಂದಲ)

ಶ್ರೀ ಸಿದ್ಧರಾಮಯ್ಯ:- ಹೊಸ ಸಂಪ್ರದಾಯಗಳನ್ನು ಇಲ್ಲಿ establish ಮಾಡುವುದಕ್ಕೆ ಹೋಗಬೇಡಿ. ಆಮೇಲೆ ರೇವಣ್ಣನವರೂ ಮಾತನಾಡಲಿ, ಬೇಡವೆಂದು ಹೇಳುವುದಿಲ್ಲ.

(ಗೊಂದಲ)

ಶ್ರೀ ಶ್ರೀಕಾಂತ್ ಎಸ್. ಕುಲಕರ್ಣಿ:- ನಮಗೂ ಮಾತನಾಡಲಿಕ್ಕೆ ಅವಕಾಶ ಕೊಡಬೇಕು.

ಅಧ್ಯಕ್ಷರು:- ಆಮೇಲೆ ಅವಕಾಶ ಕೊಡುತ್ತೇನೆ.

6. ಅಧ್ಯಕ್ಷರ ಅಪ್ಪಣೆ ಮೇರೆಗೆ ಪ್ರಸ್ತಾಪಿಸಲಾದ ವಿಷಯಗಳು

ವಿಷಯ: ಕಾವೇರಿ ನೀರಿನ ವಿಷಯದಲ್ಲಿ Supreme Court ನೀಡಿರುವ ತೀರ್ಪಿನ ಕುರಿತು:

ಶ್ರೀ ಸಿದ್ಧರಾಮಯ್ಯ:- ಈಗ ತಾನೆ ನಮಗೆ ಮಾಧ್ಯಮಗಳ ಮೂಲಕ, ಮಾಧ್ಯಮ ಸ್ನೇಹಿತರ ಮೂಲಕ ಸುದ್ಧಿ ಬಂದಿದೆ. Supreme Court ನಲ್ಲಿ ಕಾವೇರಿ ವಿವಾದದ ಬಗ್ಗೆ ಇವತ್ತು ಕೇಸ್ ನಡೆಯುತ್ತಿತ್ತು, Supreme Court ನವರು ಒಂದು ಆದೇಶ ಮಾಡಿದ್ದಾರೆ. ೧೦ ಸಾವಿರ ಕ್ಯೂಸೆಕ್ಸ್ ನೀರನ್ನು ೫ ದಿನಗಳ ಕಾಲ ಬಿಡಬೇಕೆಂದು ಆದೇಶ ಮಾಡಿದ್ದಾರೆ. ಇದು ಅಪಾಯಕಾರಿ ಮತ್ತು ಬಹಳ ಆಘಾತಕಾರಿಯಾದ ವಿಷಯ. ಕರ್ನಾಟಕಕ್ಕೆ ದೊಡ್ಡ ಆಘಾತ-ಕಾರಿಯಾದ ಒಂದು ಆದೇಶ ಇದಾಗಿದೆ. Supreme Court ನಿಂದ ಈ ತರಹ ಆದೇಶ ಬರುತ್ತದೆಂದು ಬಹುಶ: ಸಾವ್ಯಾರೂ ನಿರೀಕ್ಷೆ ಮಾಡಿರಲಿಲ್ಲ. We have a very good case. I do not know ಏಕೆ ಈ ತರಹ ಬಂತು ಎಂಬುದು ದುರಾದೃಷ್ಟ. ಎಲ್ಲಾ ಜಲಾಶಯಗಳಲ್ಲಿರುವ ನೀರನ್ನು ಸೇರಿಸಿದರೆ ನಮ್ಮ ಹತ್ತಿರ ೩೪ ಟಿ.ಎಂ.ಸಿ. ನೀರು ಮಾತ್ರ ಇದೆ. Standing crop ಗೆ ಈಗಿರುವ ನೀರು ಸಾಕಾಗುತ್ತಿಲ್ಲ. ಕುಡಿಯುವ ನೀರು ಸಹ ಇಲ್ಲ. ಪ್ರಾಣಿ ಪಕ್ಷಿಗಳಿಗಂತೂ ನೀರು ಸಿಗುವುದಿಲ್ಲ. ಇಂಥ ಪರಿಸ್ಥಿತಿ ಇರುವಾಗ